**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 875/2025**

ಸರ್ಕಾರದ ಪರವಾಗಿ
ಕುಂದಾಪುರ ಗ್ರಾಮಾಂತರ ಠಾಣಾ ಪೋಲಿಸರು. --- ಪಿರ್ಯಾದಿದಾರರು

-ಮತ್ತು-

1. ಅರುಣ ಪೂಜಾರಿ, 39 ವರ್ಷ,
ತಂದೆ: ಮಂಜು ಪೂಜಾರಿ,
ವಾಸ: ಕಾಂತರೂ ಬೈಲು, ಅನಗಳ್ಳಿ ಗ್ರಾಮ,
ಕುಂದಾಪುರ ತಾಲೂಕು.

2. ಪ್ರವೀಣ, 30 ವರ್ಷ,
ತಂದೆ: ಭದ್ರ ದೇವಾಡಿಗ,
ವಾಸ: ಜಾಲಾಡಿ ಕಟ್ ಬೆಲ್ತೂರು,
ಕಟ್ ಬೆಲ್ತೂರು ಗ್ರಾಮ,
ಕುಂದಾಪುರ ತಾಲೂಕು.

3. ರಮೇಶ, 44 ವರ್ಷ,
ತಂದೆ: ಮಂಜುಪೂಜಾರಿ,
ವಾಸ: ಮನೆ ನಂಬ್ರ 94 ಸರ್ಕಾರಿ ಹೈಸ್ಕೂಲ್ ಹತ್ತಿರ,
ಹಂಡಕುಂದ, ಕರ್ಕುಂಜೆ ಗ್ರಾಮ,
ಕುಂದಾಪುರ ತಾಲೂಕು.

4. ನಾಗರಾಜ, 37 ವರ್ಷ,
ತಂದೆ: ಶಂಕರ ಪೂಜಾರಿ,
ವಾಸ: ಬಿಹೆಚ್ ಎಮ್ ರೋಡ್,
ನಂದಿಬೆಟ್ಟು, ಕುಂದಾಪುರ ಕಸಬಾ ಗ್ರಾಮ,
ಕುಂದಾಪುರ ತಾಲೂಕು.

5. ಅಭಿಶೇಕ್, 30 ವರ್ಷ,
ತಂದೆ: ಕರಿಯಾ ಪೂಜಾರಿ,
ವಾಸ: 2-137 ಕರ್ದಾದ ಹಕ್ಲು,
ಕುಂದಬಾರಂದಾಡಿ ಗ್ರಾಮ,
ಕುಂದಾಪುರ ತಾಲೂಕು.

6. ನಿತೇಶ್ ಶೆಟ್ಟಿ ಯಾನೆ ಸೋನು ಶೆಟ್ಟಿ, 30 ವರ್ಷ,
ತಂದೆ: ಆನಂದ ಶೆಟ್ಟಿ,
ವಾಸ: ಕಂಬಾಲಗದ್ದೆ ಮನೆ,
ದೇವಲಕುಂದ ಗ್ರಾಮ,
ಕುಂದಾಪುರ ತಾಲೂಕು. --- ಆರೋಪಿತರು

**<u>ಅರೋಪಣೆ</u>**

**ಶ್ರೀ ಶ್ರೀನಿವಾಸ ಕೆ. ಆರ್, ಬಿ. ಎ. ಎಲ್., ಎಲ್. ಎಲ್. ಎಮ್.,** 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕುಂದಾಪುರ, ಆದ ನಾನು ನಿಮ್ಮಗಳ ಮೇಲೆ ಆರೋಪಿಸುವುದೇನೆಂದರೆ:-

ಮೊದಲನೇಯದಾಗಿ 1 ರಿಂದ 6 ನೇ ಆರೋಪಿತರಾದ ನೀವುಗಳು ದಿನಾಂಕ 10-02-2025

ರಂದು ಸಂಜೆ 5.40 ಗಂಟೆಗೆ ಕುಂದಾಪುರ ತಾಲೂಕು, ಕೆಂಚನೂರು ಗ್ರಾಮದ ಕಾವ್ರಾಡಿಮನೆ ಹೋಗುವ ದಾರಿಯಲ್ಲಿ ಇರುವ ಸರ್ಕಾರಿ ಹಾಡಿಯಲ್ಲಿ ಹಣವನ್ನು ಪಣವಾಗಿ ಕಟ್ಟಿ ಸಂಘಟಿತರಾಗಿ ಕೋಳಿ ಅಂಕ ಜುಗಾರಿ ಆಟವನ್ನು ನಿಮ್ಮ ಸ್ವಂತ ಲಾಭಕ್ಕಾಗಿ ಕೋಳಿಗಳ ಕಾಲಿಗೆ ಕೋಳಿಬಾಳುಕಟ್ಟಿ ಕೋಳಿಗಳ ಮೇಲೆ ಹಣವನ್ನು ಪಣವಾಗಿ ಕಟ್ಟಿ ಜೂಜಾಟ ಆಡುತ್ತಿರುತ್ತೀರಿ, ಆ ಮೂಲಕ ಕರ್ನಾಟಕ ಪೋಲಿಸ್ ಕಾಯ್ದೆ ಕಲಂ 87, 93 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅದೇ ದಿನಾಂಕ ಮತ್ತು ಸಮಯದಲ್ಲಿ, 1 ರಿಂದ 6 ನೇ ಆರೋಪಿತರಾದ ನೀವುಗಳು ಕೋಳಿಗಳ ಕಾಲಿಗೆ ಕೋಳಿಬಾಳುಕಟ್ಟಿ ಕೋಳಿಗಳನ್ನು ಹಿಂಸಾತ್ಮಕ ರೀತಿಯಲ್ಲಿ ಜೂಜಾಟಕ್ಕೆ ಉಪಯೋಗಿಸಿಕೊಂಡು ಆಡುತ್ತಿರುತ್ತೀರಿ, ಆ ಮೂಲಕ ಕಲಂ 11(1)(ಎ) ಪ್ರಾಣಿ ಹಿಂಸೆ ತಡೆ ಕಾಯಿದೆ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೂರನೇಯದಾಗಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅದೇ ದಿನಾಂಕ ಮತ್ತು ಸಮಯದಲ್ಲಿ,1 ರಿಂದ 6 ನೇ ಆರೋಪಿತರಾದ ನೀವುಗಳು ಸರ್ಕಾರಿ ಹಾಡಿಯಲ್ಲಿ ಸಂಘಟಿತರಾಗಿ ಕೋಳಿ ಅಂಕ ಜುಗಾರಿ ಆಟವನ್ನು ಆಡುತ್ತಿರುತ್ತೀರಿ, ಆ ಮೂಲಕ ಕಲಂ 112 ಬಿ.ಎನ್.ಎಸ್. ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ದಿನಾಂಕಃ 15.07.2026

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು<br>ಜೆ.ಎಂ.ಎಫ್.ಸಿ, ಕುಂದಾಪುರ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ-1ಃ- ಈಗ ಓದಿ ಹೇಳಿದ ದೋಷಾರೋಪಣೆಗಳನ್ನು ಕೇಳಿ ತಿಳಿದುಕೊಂಡಿರುವಿರಾ ?

ಉತ್ತರಃ- ಆ-1.

ಆ-2.

ಆ-3.

ಆ-4.

ಆ-5.

ಆ-6.

ಪ್ರಶ್ನೆ-2ಃ- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಬೇಕಾ ?

ಉತ್ತರಃ- ಆ-1.

ಆ-2.

ಆ-3.

ಆ-4.

ಆ-5.

ಆ-6.

(ಆರೋಪಣೆಗಳನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಗಳನ್ನು ಪಡೆದು ನಮೂದಿಸಿದ್ದು, ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ ).

ದಿನಾಂಕ:- 15.07.2026

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕುಂದಾಪುರ.